Raiyats' Bank in Mysore State.

Q.—170. Srimathi B. L. SUBBAMMA (Chikmagalur-Mudigere).—

Will the Government be pleased to state :—

(*a*) whether they propose to start a bank for raiyats (ರೈತರ ಬ್ಯಾಂಕು) in Chikmagalur District ;

(*b*) whether they do not consider it desirable to start one in the interests of the raiyats ?

A.— Dr. R. NAGAN GOWDA (Minister for Agriculture).—

(*a*) A District Bank will be started, if there is sufficient public response.

(*b*) Does not arise in view of the reply to (*a*).

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸಾರ್ವಜನಿಕರು ಹಾಗೆ ಏರ್ಪಡಿಸಬೇಕೆಂದು ಕೇಳಿದ ಪಕ್ಷದಲ್ಲಿ ಒಂದು ಡಿಸ್ಟ್ರಿಕ್ಟ್ ಬ್ಯಾಂಕನ್ನು ಏರ್ಪಡಿಸುವಾಗುವುದು ಎಂದು ಹೇಳಿದ್ದೀರಿ. ರೈತರ ಆರ್ಥಿಕ ದೃಷ್ಟಿಯಿಂದ ಇದು ಅತ್ಯವಶ್ಯ, ಅಲ್ಲವೇ ಎಂಬುದನ್ನು ಪರಿಶೀಲಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಇದು ಬಹಳ ಅಗತ್ಯವಾದ ಕೆಲಸ ಎಂದುಹೇಳಿ ಸರ್ಕಾರದವರು ಗಮನದಲ್ಲಿಟ್ಟುಕೊಂಡಿದ್ದಾರೆ; ಅವರಿಗೆ ಅರ್ಥವಾಗಿದೆ. ಈಗ ನದ್ದಕ್ಕೆ ಈ ವರ್ಷದಲ್ಲಿ 3 ಸೆಂಟ್ರಲ್ ಬ್ಯಾಂಕುಗಳು ಏರ್ಪಾಡಾಗಿವೆ. ಇನ್ನೂ ಮಿಕ್ಕಕಡೆ 6 ಸೆಂಟ್ರಲ್ ಬ್ಯಾಂಕುಗಳನ್ನು ಎಷ್ಟು ಶೀಘ್ರವಾಗಿ ಎಷ್ಟು ಬೇಗ ಏರ್ಪಾಡು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ಬೇಗ ಸರ್ಕಾರದವರು ಏರ್ಪಾಡುಮಾಡುವುದಕ್ಕೆ ಕಾರ್ಯಕ್ರಮ ಕೈಕೊಳ್ಳುತ್ತಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೈಸೂರು ದೇಶದಲ್ಲಿ ರೈತರ ಸಾಲ ಎಷ್ಟಿದೆ ಎಂಬುದನ್ನು ಸರ್ವೇ ಮಾಡಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸೆಂಟ್ರಲ್ ಬ್ಯಾಂಕುಗಳನ್ನು ಎಲ್ಲೆಲ್ಲ ಸ್ಥಾಪಿಸ ತಗೆದಿರುವುದು?

ಡಾ॥ ಆರ್. ನಾಗನಗೌಡ.—ಶಿವಮೊಗ್ಗ, ಹಾಸನ ಮತ್ತು ಮಂಡ್ಯ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನಲ್ಲಿ ಅದರ ಅವಶ್ಯಕತೆ ಬಹಳ ಹೆಚ್ಚಾಗಿದೆ ಎಂಬುದು ಸರ್ಕಾರದವರ ಗಮನದಲ್ಲಿಲ್ಲವೇ?

ಡಾ॥ ಆರ್. ನಾಗನಗೌಡ.—ಅಂಥ ಬ್ಯಾಂಕನ್ನು ಬೆಂಗಳೂರಿನಲ್ಲೂ ತೆಗೆಯಬೇಕೆಂದು ಇಷ್ಟಪಟ್ಟರೆ, ತಮ್ಮಂಥ ಮಹನೀಯರು ಬಂದು ಸಹಾಯ ಮಾಡಿದರೆ ಜಾಗ್ರತೆ ಏರ್ಪಾಡು ಮಾಡುವುದಕ್ಕೆ ಅವಕಾಶವಾಗುತ್ತದೆ ; ಜಾಗ್ರತೆ ಮಾಡುತ್ತವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಉತ್ತರದಲ್ಲಿ 'ಸಾರ್ವಜನಿಕರು ಏರ್ಪಡಿಸಬೆಕೆಂದು ಕೇಳಿದ ಪಕ್ಷದಲ್ಲಿ' ಎಂದು ಹೇಳಿದ್ದೀರಿ. ಮಂಡ್ಯ, ಶಿವಮೊಗ್ಗ, ಹಾಸನ ಈ ಪ್ರದೇಶಗಳಲ್ಲಿ ತೆರೆದಂಥ ಕಾಲದಲ್ಲಿ ಸಾರ್ವಜನಿಕರನ್ನು ಕೇಳಿದ್ದಿರಲ್ಲವೇ!

ಡಾ॥ ಆರ್. ನಾಗನಗೌಡ.—ಅಲ್ಲಿನ ಮುಖಂಡರನ್ನು consult ಮಾಡಿದೆವು. ಅವರ ಕಡೆಯಿಂದ ಇಂಥ ಸಹಾಯಬೇಕು ಎಂದು ಸಮಾಚಾರ ಬಂತು. ಅದನ್ನೇ ಮುಖ್ಯವಾದ ಕ್ರೈಟೀರಿಯನ್ ಆಗಿ ಇಟ್ಟುಕೊಳ್ಳುವುದಿಲ್ಲ. ಈಗ 3 ಜಿಲ್ಲೆಗಳಲ್ಲಿ 3 ಸೆಂಟ್ರಲ್ ಬ್ಯಾಂಕ್‌ಗಳನ್ನು ಏರ್ಪಾಡು ಮಾಡಿದ್ದೇವೆ. ಇನ್ನೂ ಮಿಕ್ಕ ಆರು ಡಿಸ್ಟ್ರಿಕ್ಟ್‌ಗಳಲ್ಲಿ ಎಷ್ಟು ಶೀಘ್ರವಾಗಿ ಸಾಧ್ಯವಾಗುತ್ತದೆಯೋ ಅಷ್ಟು ಶೀಘ್ರವಾಗಿ ಏರ್ಪಾಡು ಮಾಡುತ್ತೇನೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ತುಮಕೂರು ಡಿಸ್ಟ್ರಿಕ್ಟ್‌ನಲ್ಲೂ ಅಂಥ ಒಂದು ಬ್ಯಾಂಕನ್ನು ಏರ್ಪಾಡು ಮಾಡುತ್ತೀರಾ ?

Mr. SPEAKER.—Six centres may nclude Tumkur also.

Activities of S.P.C.A. and S.P.K.A.

Q.— 354. Sri A. V. NARASIMHA REDDY (Bangalore South).—

Will the Government be pleased to state :—

(*a*) when the organisation called S.P.C.K.A. was organised ;

(*b*) whether the Government are getting periodical reports of this organisation ;

(*c*) the nature of work this organisation is doing ;

(*d*) the number of cases launched by this organisation during the year 1952 to 15th December 1953 (monthly information may kindly be furnished) ;

(*e*) the names of persons that are in this organisation ?

A.— Dr. R. NAGAN GOWDA (Minister for Agriculture). —

(*a*) There is no such organisation as S.P.C.K.A. in the State. But there are two independent organisations functioning under the names of (1) S.P.C.A. (Society for the Prevention of Cruelty to Animals) which was organised in 1916, and (2) S.P.K.A. (Society for the Promotion of Kindness to Animals) which was organised in 1939.

(*b*) No.

(*c*) to (*e*) Does not arise in view of answer to clause (*b*).

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಎಸ್. ಪಿ. ಸಿ. ಎ. ಮತ್ತು ಎಸ್. ಪಿ. ಕೆ. ಎ. ಸಂಸ್ಥೆಗ ಪರಿಗೆ ಏನಾದರೂ ಸರ್ಕಾರದವರು ಮೊಕದ್ದಮೆಗಳನ್ನು ಹೂಡತಕ್ಕ ಅಧಿಕಾರ ಕೊಟ್ಟಿದ್ದಾರೆಯೇ ?

Dr. R. NAGAN GOWDA.—As I have said in (*b*), we are not receiving any periodical reports from them.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಾನು ಎಸ್. ಪಿ. ಸಿ. ಕೆ. ಎ. ಸಂಸ್ಥೆಯವರ ವಿಷಯ ಕೇಳಿದ್ದೆ. ಬೇರೆ ಬೇರೆಯಾಗಿ ಉತ್ತರದಲ್ಲಿ ಕೊಟ್ಟಿದ್ದೀರಿ. ಈ ಎರಡು ಸಂಸ್ಥೆಗಳವರಿಗೆ ಪನಾಪರೂ ನರ್ಕಾರದವರು ಮೊಕದ್ದಮೆಗಳನ್ನು ಹೂಡತಕ್ಕ ಅಧಿಕಾರವನ್ನು ಕೊಟ್ಟಿದ್ದಾರೆಯೇ ಎಂದು ನನ್ನ ಪ್ರಶ್ನೆ.

Dr. R. NAGAN GOWDA. There is no organisation known as S.P.C.K.A. in the State. There are two independent organisations one known as S.P.C.A. which was organised in 1916 and another S.P.K.A. which was organised in 1939.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸಂಸ್ಥೆಗಳವರು ಹಳ್ಳಿಗಳಿಂದ ಬರತಕ್ಕ ಗಾಡಿ, ಎತ್ತುಗಳನ್ನು ಹಿಡಿದು ಬೆಂಚ್ ಕೋರ್ಟ್‌ಗಳಲ್ಲಿ ಮೊಕದ್ದಮೆ ಹೂಡುವುದು ನರ್ಕಾರದವರ ಗಮನಕ್ಕೆ ಬಂದಿದೆಯೇ?

Dr. R. NAGAN GOWDA.—I do not think they are authorised, Sir.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗೇನಾದರೂ ಮೊಕದ್ದಮೆಗಳನ್ನು ಹೂಡುತ್ತಾ ಇದ್ದರೆ ತಕ್ಷಣ ಆ ಸಂಸ್ಥೆಗಳನ್ನು ರದ್ದುಮಾಡುವುದಕ್ಕೆ ಅಥವಾ ಅವರು ಅರೀತಿ ಮಾಡದೇ ಇರುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

Dr. R. NAGAN GOWDA.—I will enquire into that.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸಂಸ್ಥೆಗಳವರು ಹಳ್ಳಿಗಳಿಂದ ಬರತಕ್ಕ ಎಲ್ಲಾ ಗಾಡಿಗಳಿಂದಲೂ ಲಂಚ ತೆಗೆದುಕೊಂಡು ಬಿಟ್ಟುಬಿಡುವುದು, ಲಂಚ ಕೊಡದೇ ಇದ್ದರೆ ಕೋರ್ಟುಗಳಲ್ಲಿ ಮೊಕದ್ದಮೆ ಹೂಡತಕ್ಕ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ಹಾಗೇನಾದರೂ ಅವರು ತಪ್ಪುದಾರಿಯಲ್ಲಿ ಹೋಗುತ್ತಾ ಇದ್ದರೆ ಈ ಸಂಸ್ಥೆಗಳನ್ನು ರದ್ದು ಮಾಡುತ್ತೀರಾ ?

Dr. R. NAGAN GOWDA.—I will enquire into the matter that the Hon'ble Member is referring to, Sir.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಿದ್ದರೆ ಈ ಸ್ಮಾಲ್‌ಕಾಸ್ ಕೋರ್ಟಿನಲ್ಲಿ ಹಿಂದೆ ಎಷ್ಟು ಮೊಕದ್ದಮೆಗಳನ್ನು ಹೂಡಿದ್ದಾರೆ ಎಂಬ ವಗದಿ ತರಿಸಿ ತನಿಖೆ ಮಾಡ ತ್ತೀರಾ, ಸ್ವಾಮಿ ?

ಡಾ॥ ಆರ್. ನಾಗನಗೌಡ.—ತರಿಸುತ್ತೇವೆ, ಸ್ವಾಮಿ.

If the Hon'ble Member would bring specific cases, it would be very helpful for us. But if any such thing such as hadrassing poor villagers coming into the City comes to the notice of the Government, proper action will be taken. We also will make enquiries about it.

ಶ್ರೀ ಬೈರೇಗೌಡ.—ಈ ಸಂಸ್ಥೆಗಳ ಅಧ್ಯಕ್ಷರು ಯಾರು, ಸ್ವಾಮಿ ?

ಡಾ॥ ನಾಗನಗೌಡ.—ನೋಟೀಸ್.

ಶ್ರೀ ಬೈರೇಗೌಡ.—ಈ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕವರು ಯಾರುಯಾರು ಎಂಬುದನ್ನು ತಿಳಿಸುತ್ತೀರಾ ?

Dr. R. NAGAN GOWDA.—I would like to have notice about that question also, Sir.

Opening a Veterinary Dispensary at Kondethimmanahalli, Nidigal Hobli, Pavagada Taluk.

Q.-578. Sri C. T. HANUMANTHAIYA (Pavagada—Scheduled Castes).—Will the Government be pleased to state :—

(*a*) when they received a petition from the raiyats requesting for opening a Veterinary Dispensary at Kondethimmanahalli, Nidagal Hobli, Pavagada Taluk ;

(*b*) the reason for not yet opening it ?

A.—Dr. R. NAGAN GOWDA (Minister for Agriculture).—

(*a*) No such petition has been received.

(*b*) Does not arise.

ಶ್ರೀ ಸಿ. ಟಿ. ಹನುಮಂತಯ್ಯ.—ಪಾವಗಡ ತಾಲ್ಲೂಕು ನಿಡಗಲ್ ಹೋಬಳಿ, ಕೊಂಡೇತಿಮ್ಮನಹಳ್ಳಿಯಲ್ಲಿ ಪಶುವೈದ್ಯಶಾಲೆ ಇಲ್ಲ ಎಂಬುದು ನರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಉತ್ತರದಲ್ಲಿ ಹೇಳಿರುವ ಹಾಗೆ, ಮನವಿ ಯಾವುದೂ ಬಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ನಾನು ಕೇಳುತ್ತಾ ಇರುವುದು ನಿಡಗಲ್ಲು ಹೋಬಳಿ ಕೊಂಡೇತಿಮ್ಮನ ಹಳ್ಳಿಯಲ್ಲಿ ಪಶು ವೈದ್ಯಶಾಲೆ ಇಲ್ಲ ಎಂಬುದು ಗೊತ್ತೇ ಎಂದು.

ಡಾ॥ ಆರ್. ನಾಗನಗೌಡ.—ಎಕ್ಸ್‌ಕ್ಯೂಸ್ ಮಾಡಿಲ್ಲ. ಬಹುಶಃ ಇಲ್ಲ ಎಂದು ಕಾಣತ್ತದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಪಶುವೈದ್ಯಶಾಲೆ ಮಾಡಿಸಿಕೊಡಬೇಕೆಂದು ಹೇಳಿ ಮನವಿ ಬಂದರೆ ಮಾಡಿಸಿಕೊಡುತ್ತೀರಾ, ಸ್ವಾಮಿ ?

ಡಾ॥ ಆರ್. ನಾಗನಗೌಡ.—ಅಲ್ಲಿರತಕ್ಕ ಜನಗಳ ಸಂಖ್ಯೆ ನೋಡಿ ಅವಶ್ಯಕತೆ ಕಂಡುಬಂದರೆ ಏರ್ಪಾಡು ಮಾಡುವುದಕ್ಕೆ ಆದೀತು.